- -

ಓ.ಎಸ್. ನಂ.  : 12-2020

ಪಿ.ಡಬ್ಲ್ಯೂ       : 2

ಸಾಕ್ಷಿಯ ಹೆಸರುಃ ಶ್ರೀಮತಿ ನಮಿತಾ ಆನಂದು ಉಳಗೇಕರ

ದಿಃ 20-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

**ಮುಂದುರಿದ ಪಾಟೀ ಸವಾಲುಃ ಶ್ರೀ ಆರ್ ಎಸ್ ಎಚ್ (ಜಿ) ವಕೀಲರಿಂದಃ ಪ್ರತಿವಾದಿ ಪರವಾಗಿಃ**

ಪುಂಡಲೀಕನ ಹೆಂಡತಿ ದೇವಕಿ ತೀರಿಕೊಂಡ ನಂತರ ಲಲಿತಾ ರವರ ಹೆಸರು ಪಹಣಿ ಪತ್ರಿಕೆಯಲ್ಲಿ ಬಂದಿದು ಇರುತ್ತದೆ. ನಾನು 5-6 ವರ್ಷ ವಯಸ್ಸಿನವಳು ಇರುವಾಗ ದೇವಕಿಯ ಮಕ್ಕಳನ್ನು ನೋಡಿದ್ದು ಇರುತ್ತದೆ. ಲಲಿತಾ ತೀರಿಕೊಂಡಿದ್ದು, ಮತ್ತು ದೇವಕಿಯ ಉಳಿದ ಮಕ್ಕಳು ಮೊದಲೇ ತೀರಿಕೊಂಡಿದ್ದರು. ನಮ್ಮ ಅಜ್ಜಿ ತೀರಿಕೊಂಡಿದ್ದು, ಯಾವಾಗ ತೀರಿಕೊಂಡಿದ್ದು ಅಂತಾ

ಹೇಳಲು ಆಗುವುದಿಲ್ಲ. ನಾನು ಅಜ್ಜಿಯನ್ನು ನೋಡಿದ್ದು ಇರುತ್ತದೆ. ಎಷ್ಟು ವರ್ಷಗಳ ಹಿಂದೆ ನನ್ನ ಅಜ್ಜಿ ತೀರಿಕೊಂಡಿದ್ದಾರೆ ಅಂತಾ ಹೇಳಲು ಆಗುವುದಿಲ್ಲ, ನಾನು 5-6 ವರ್ಷ ವಯಸ್ಸಿನವಳು ಇರುವಾಗ ತೀರಿಕೊಂಡಿರುತ್ತಾಳೆ. ನಮ್ಮ ಅಜ್ಜ ಮೊದಲೇ ತೀರಿಕೊಂಡಿದ್ದು ಇರುತ್ತದೆ. ದೇವಕಿಗೆ ಮತ್ತು ಪುಂಡಲೀಕ ಅಣ್ಣ ತಂಗಿಯ ಸಂಬಂಧ. ಸಂಬಂಧದ ಕುರಿತು ಆಧಾರ ಕಾರ್ಡ ಇರುತ್ತದೆ. ಆಧಾರ ಕಾರ್ಡನ್ನು ಹುಡಕುತ್ತೇವೆ. ಕೊಯರ್ ರವರಿಗೆ ದೇವಕಿ ಮತ್ತು ಪುಂಡಲೀಕ ಮಕ್ಕಳು. ದೇವಕಿ ಕೋಯರರವರ ಮಕ್ಕಳು ಅಂತಾ ತೋರಿಸಲು ದಾಖಲಾತಿ ಹುಡುಕುತ್ತಿದ್ದೇವೆ.

ಕೊಯರ್ ನವರಿಗೆ ಸುಬ್ಬ ಎನ್ನುವ ಸಹೋದರ ಇದ್ದ ಎಂದರೆ ನನಗೆ ಗೊತ್ತಿಲ್ಲ. ಸುಬ್ಬನು ಕೂಡ ತೀರಿಕೊಂಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ, ಸುಬ್ಬನ ಮಗ ಸೈರೋಬ ಎಂದರೆ ನನಗೆ ಗೊತ್ತಿಲ್ಲ. ಸೈರೋಬ ಮತ್ತು ಸುಬ್ಬಒಂದೇ ಮನೆಯಲ್ಲಿ ಎರಡು ಭಾಗ ಮಾಡಿಕೊಂಡು ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನಗಳಲ್ಲಿ ಒಂದೆ ಮನೆ ಇದೆ ಎಂದರೆ ಸರಿ. ಅದಕ್ಕೆ ಎರಡು ಭಾಗಗಳು ಎಂದರೆ ನನಗೆ ಗೊತ್ತಿಲ್ಲ. ಒಂದು ಭಾಗದಲ್ಲಿ ಸುಬ್ಬ ಇನ್ನೊಂದರಲ್ಲಿ ಸೈರೋಬ ಇರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಮನೆಯ ಸರ್ವೆ ನಂಬರ್ ಗೊತ್ತಿಲ್ಲ. ಮನೆ ನಂಬರು ಗೊತ್ತಿದೆ.

ದಾವಾ ಜಮೀನು ಪುಂಡಲೀಕನಿಗೆ ಹೇಗೆ ಬಂದಿದೆ ಎಂದು ಗೊತ್ತಿಲ್ಲ, ಪುಂಡಲೀಕ ದಾವಾ ಜಮೀನನ್ನು ರೈತಾಪಿ ನಾತೆಯಿಂದ ಗೇಣಿ ಮಾಡುತ್ತಿದ್ದನು ಎಂದರೆ ಸರಿ. ನಂತರ ಟ್ರಿಬುನಲ್ ಆದೇಶದ ಮೇರೆಗೆ ಸದರಿ ಜಮೀನು ಮಂಜೂರು ಆಗಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪುಂಡಲೀಕ 2018 ರಲ್ಲಿ ತೀರಿಕೊಂಡಿರುತ್ತಾರೆ. ಪುಂಡಲೀಕ ತೀರಿಕೊಂಡ ನಂತರ ಪಹಣಿ ಪತ್ರಿಕೆಯಲ್ಲಿ ಲಲಿತಾ ಹೆಸರು ಇರುತ್ತದೆ.

**(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.